


# ತರಗತಿಯಲ್ಲಿ ಪ್ರಾಯೋಗಿಕ ಮನಶ್ಶಾಸ್ತ್ರ

ಎಸ್. ದಂಡಪಾಣಿ

ಪ್ರಯೋಗ ಎಂದರೇನು? ಪ್ರಯೋಗವೆಂದರೆ ಮನುಷ್ಯನು ಪ್ರಕೃತಿಯನ್ನು ಕೇಳುವ ಪ್ರಶ್ನೆ. ಒಂದು ನಿಯಂತ್ರಿತ ಪರಿಸ್ಥಿತಿಯಲ್ಲಿ ನಿಯಮಬದ್ಧವಾಗಿ ಮಾಡುವ ನಿರೀಕ್ಷಣೆ. (An experiment is a question put to Nature. It is a systematic study, a controlled observation.) ನಾವು ಯಾವುದಾದರೊಂದು ಸಂಗತಿಯನ್ನು ಗಮನಿಸುವಾಗ, **ಏಕೆ, ಹೇಗೆ, ಯಾವಾಗ** ಎಂಬ ಪ್ರಶ್ನೆಗಳನ್ನು ಕೇಳುತ್ತೇವೆ. ಇದೇ ಎಲ್ಲ ರೀತಿಯ ವಿಜ್ಞಾನದ ಆಧಾರ. ಏಕೆಂದರೆ ವಿಜ್ಞಾನವು ಪ್ರಯೋಗಾತ್ಮಕವಾದುದು. ಆದರೆ ಅಂತಹ ಪ್ರಯೋಗವು ನಿಯಮಬದ್ಧವಾಗಿರಬೇಕು. ಅದರಲ್ಲಿ ತಪ್ಪುಮಾಡುವ ಸಾಧ್ಯತೆ ಆದಷ್ಟು ಕಡಮೆಯಿರಬೇಕು. ಹಾಗಾಗಿ ಅದು ದೋಷರಹಿತವಾಗಿರಬೇಕು ಮತ್ತು ಒಂದು ನಿರ್ದಿಷ್ಟ ನಿಯಂತ್ರಿತ ಪರಿಸ್ಥಿತಿಯಲ್ಲಿ ನಡೆಯಬೇಕು.

ಮನಶ್ಶಾಸ್ತ್ರಜ್ಞರು ಮಾಡುವ ಪ್ರಯೋಗದಲ್ಲಿ 'ಮಾನವ'ನೇ ಪ್ರಯೋಗದ ವಸ್ತು. ಮಾನವಜೀವಿಯ ನಡವಳಿಕೆಯಲ್ಲಿ ಕಾಣಬರುವ ವ್ಯತ್ಯಾಸಗಳೇ ಈ ಪ್ರಯೋಗದ ವಿಷಯ. ಇದನ್ನು ಕೆಳಗಿನ ನಿದರ್ಶನದಿಂದ ವಿವರಿಸಬಹುದು:

ನಾವೀಗ ಸಮಾಜಶಾಸ್ತ್ರವನ್ನು ಎಂಟನೆಯ ತರಗತಿಯ ಮಕ್ಕಳಿಗೆ ಪಾಠ ಮಾಡಬೇಕಾಗಿದೆ ಎಂದುಕೊಳ್ಳೋಣ. ನಾವು ವಿವಿಧ ರೀತಿಯ ಬೋಧನಾಕ್ರಮಗಳನ್ನು ಪ್ರಯೋಗ ಮಾಡಿನೋಡಲು ಇಚ್ಛಿಸುತ್ತೇವೆ. ಅದಕ್ಕಾಗಿ ನಾವೇನು ಮಾಡಬೇಕು? ಮಕ್ಕಳನ್ನು ಮೊದಲು ಮೂರು ಗುಂಪುಗಳಾಗಿ ವಿಭಾಗ ಮಾಡೋಣ: A, B ಮತ್ತು C. ಮೂರೂ ಗುಂಪಿನ ಮಕ್ಕಳ ಕಲಿಕೆಯ ಸಾಮರ್ಥ್ಯ ಸರಿಸುಮಾರು ಒಂದೇ ಇರಬೇಕು. ಆ ರೀತಿ ನಾವು ಗುಂಪುಗಳಾಗಿ ವಿಂಗಡಿಸಬೇಕು.

ಮೊದಲು A ಗುಂಪಿಗೆ **'ಸರಳ ವಿವರಣೆ ವಿಧಾನ'**ದ ಮೂಲಕ ಒಂದು ನಿರ್ದಿಷ್ಟ ವಿಷಯದ ಮೇಲೆ ಪಾಠ ಮಾಡುತ್ತೇವೆ. B ಗುಂಪಿಗೆ **'ಗುಂಪು ಚರ್ಚೆ'**ಯ ವಿಧಾನದಿಂದ ಪಾಠ ಮಾಡುತ್ತೇವೆ ಹಾಗೂ C ಗುಂಪಿನ ಮಕ್ಕಳನ್ನು **'ಗ್ರಂಥಾಲಯದ ಸಹಾಯ ಪಡೆದು ಸ್ವಾಧ್ಯಾಯ'** ಮಾಡುವ ವಿಧಾನದಿಂದ ಆ ವಿಷಯದ ಬಗ್ಗೆ ಮಾಹಿತಿ ಪಡೆದು ಕಲಿಯುವಂತೆ ತಿಳಿಸುತ್ತೇವೆ. ಈ ಮೂರು ವಿಧಾನಗಳ ಮೂಲಕ, ಆಯಾ ಗುಂಪಿನ ವಿದ್ಯಾರ್ಥಿಗಳು ಒಂದೇ ವಿಷಯವನ್ನು ಬೇರೆ ಬೇರೆ ರೀತಿಯಲ್ಲಿ ಕಲಿಯುತ್ತಾರೆ.

ಇನ್ನು ಮುಂದೆ, ಅವರಿಗೆಲ್ಲರಿಗೂ ಕಿರುಪರೀಕ್ಷೆಯನ್ನು ನಡೆಸಬೇಕು. ಅವರ ಉತ್ತರಗಳನ್ನು ಮೌಲ್ಯಮಾಪನ ಮಾಡಬೇಕು. ಆಗ ಮೂರೂ ಗುಂಪುಗಳ ಮಕ್ಕಳು ಎಷ್ಟು ಚೆನ್ನಾಗಿ ಕಲಿತಿದ್ದಾರೆ ಎನ್ನುವುದನ್ನು ನಾವು ಕಂಡುಹಿಡಿಯಬಹುದು. ಆ ಮೂಲಕ ಯಾವ ವಿಧಾನವು ಅತ್ಯಂತ ಪರಿಣಾಮಕಾರಿಯಾದುದು ಎಂದು ವೈಜ್ಞಾನಿಕವಾಗಿ ತಿಳಿದುಕೊಳ್ಳಬಹುದು. ಅದಲ್ಲದೆ, ಯಾವ ವಿಧಾನದಲ್ಲಿ ಮಕ್ಕಳ ಕಲಿಕೆಯ ಸಾಮರ್ಥ್ಯವು ಗಣನೀಯವಾಗಿ ಅಧಿಕಗೊಂಡಿದೆ ಎಂಬುದನ್ನೂ ನಿರ್ಧರಿಸಬಹುದು.

ಕೆಲವು ಸ್ವತಂತ್ರ ವಿಧಾನಗಳು, ಅವುಗಳ ಮೇಲೆ ಅವಲಂಬಿಸಿದ ಫಲಿತಾಂಶಗಳ ಮೇಲೆ ಉಂಟುಮಾಡುವ ಪ್ರಭಾವವನ್ನು ಕರಾರುವಾಕ್ಕಾಗಿ ಅಳೆಯುವುದೇ ಒಂದು ಪ್ರಯೋಗದ ಉದ್ದೇಶ. ಈ ನಿದರ್ಶನದಲ್ಲಿ ನಾವು ಉಪಯೋಗಿಸಿದ ಸ್ವತಂತ್ರ ಪ್ರಯೋಗವಿಧಾನಗಳ ಮೇಲೆ ಮಕ್ಕಳ ಸಾಧನೆಯು ಅವಲಂಬಿತವಾಗಿದೆ, ಅಲ್ಲವೇ. ಆದ್ದರಿಂದ ನಾವು ಕೈಗೊಂಡ ಪ್ರಯೋಗವು ವೈಜ್ಞಾನಿಕವಾದುದು ಎನ್ನುವುದು ಸಿದ್ಧವಾಗುತ್ತದೆ.

ಈ ರೀತಿಯ ಸರಳ ಪ್ರಯೋಗಗಳನ್ನು, ನಮ್ಮ ಆವಶ್ಯಕತೆಗೆ ಅನುಸಾರವಾಗಿ ನಾವು ಶಾಲಾ ತರಗತಿಯಲ್ಲಿ ಕೈಗೊಳ್ಳಲು ಸಾಧ್ಯ. ಇದರಿಂದ ಮಕ್ಕಳ ಕಲಿಕೆಯ ಮಟ್ಟವನ್ನು ನಾವು ಗಣನೀಯವಾಗಿ ಸುಧಾರಿಸಬಹುದು. ಹಾಗೆಯೇ ನಮ್ಮ ಬೋಧನೆಯ ಕ್ರಮವನ್ನು ಇನ್ನೂ ಪರಿಣಾಮಕಾರಿಯನ್ನಾಗಿ ಮಾಡಿಕೊಳ್ಳಬಹುದು. ಹೀಗೆ ನಮ್ಮ ವೃತ್ತಿಯನ್ನು ಹೆಚ್ಚು ಹೆಚ್ಚು ಅರ್ಥವತ್ತಾಗಿ ಮಾಡಿಕೊಳ್ಳಬಹುದು.



# ವಚನ ಸಾಹಿತ್ಯದ ಮಹತ್ವ

ಸಿದ್ಧರಾಮಯ್ಯ

**ಶಿವಶರಣರು ಆಧ್ಯಾತ್ಮಿಕ ಮತ್ತು ಸಾಮಾಜಿಕ ಕ್ರಾಂತಿಯ ಹರಿಕಾರರು. ಇವರಿಂದ ಒಡಮೂಡಿದ ವಚನಗಳು ಕನ್ನಡದಲ್ಲಿ ಸಾಹಿತ್ಯಕ್ರಾಂತಿಯನ್ನೂ ಉಂಟುಮಾಡಿದವು. ಈ ಅಂಶವನ್ನು ನಿರೂಪಿಸಿರುವ ಲೇಖಕರು ನಿವೃತ್ತ ಶಿಕ್ಷಣ ಉಪನಿರ್ದೇಶಕರು.**

**ಆ**ದಿ–ಅಂತ್ಯವಿಲ್ಲದೆ ಸದಾ ಬದಲಾಗುತ್ತಿರುವ ಈ ವಿಶ್ವವು ನೈತಿಕ, ಸಾಮಾಜಿಕ, ಆರ್ಥಿಕ – ಈ ಎಲ್ಲ ರಂಗಗಳಲ್ಲಿ ಅನೇಕ ಏಳಿಗೆ ಅವನತಿಗಳನ್ನು ಕಂಡಿದೆ. ನಮ್ಮ ಹಿಂದಿನ ಇತಿಹಾಸವನ್ನು ಅವಲೋಕಿಸುತ್ತ ಬಂದಾಗ ಕ್ರಿ.ಶ. ೧೨ನೇ ಶತಮಾನದಲ್ಲಿ ದಕ್ಷಿಣದೇಶವನ್ನಾಳಿದ ಕಳಚೂರ್ಯ ವಂಶದ ದೊರೆ ಬಿಜ್ಜಳನ ಆಳ್ವಿಕೆಯಲ್ಲಿ ಅಧಿಕ ಅಚ್ಚರಿಯೆಂಬಂತೆ ಎರಡು ಕ್ರಾಂತಿಗಳು ಜರುಗಿದವು – ಒಂದು **ಸತ್ಯಾನ್ವೇಷಣೆ,** ಮತ್ತೊಂದು **ಸಮಾಜಸುಧಾರಣೆ.** ಈ ಕ್ರಾಂತಿಗಳಲ್ಲಿ ಮುಂಚೂಣಿಯಲ್ಲಿದ್ದ ಮಹಾತ್ಮರನ್ನು ಅಂದಿನ ಜನರು 'ಶರಣರು' ಎಂದು ಕರೆದರು. ಇದಕ್ಕೆ ಕಾರಣ, ಅವರು ಅಂತರಂಗ ಮತ್ತು ಬಹಿರಂಗಗಳಲ್ಲಿ ಪರಿಶುದ್ಧರಾಗಿದ್ದರು.

## ಆಧ್ಯಾತ್ಮಿಕ ಸತ್ಯಾನ್ವೇಷಣೆ

ವೈಚಾರಿಕವಾಗಿ ಬಹಳ ಮುಂದುವರೆದಿದ್ದ ಆ ಶರಣರು ತಮ್ಮ ಸತ್ಯಾನ್ವೇಷಣೆಯಲ್ಲಿ ಒಂದು ವಿನೂತನವಾದ ಮಾರ್ಗವನ್ನು ರೂಪಿಸಿಕೊಂಡರು. ಲಿಂಗಾಂಗಸಾಮರಸ್ಯದ ಮೂಲಕ ಸಾಕ್ಷಾತ್ಕಾರ ಮಾಡಿಕೊಳ್ಳುವುದೇ ಈ ವಿಧಾನ. ಇದೇ ಮುಂದೆ 'ವೀರಶೈವ' ಅಥವಾ 'ಲಿಂಗಾಯತ ಧರ್ಮ'ವೆಂದು ಕರೆಯಿಸಿಕೊಂಡಿತು. ಈ ಧರ್ಮದಲ್ಲಿ ಅಷ್ಟಾವರಣವೇ ಪೂಜಾ ಪರಿಕರಗಳು (ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ರುದ್ರಾಕ್ಷಿ, ವಿಭೂತಿ, ಹೂವು, ಪತ್ರೆ); ಪಂಚ ಆಚಾರಗಳೇ ಕ್ರಿಯಾಸಂಹಿತೆ (ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ, ಭೃತ್ಯಾಚಾರ). ಷಟ್ಸ್ಥಲಗಳೆಂಬ ಆರು ಮೆಟ್ಟಲುಗಳು ಅಥವಾ ಮಜಲುಗಳನ್ನು ಏರಿ (ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗ, ಐಕ್ಯ), ದೇವರಲ್ಲಿ ಒಂದಾಗಿ ಬೆರೆತು, ಈ ಜನನ ಮರಣದ ಚಕ್ರದಿಂದ ಬಿಡುಗಡೆ ಹೊಂದುವುದೇ ವೀರಶೈವ ಧರ್ಮದ ಸಾಧನಾಮಾರ್ಗ.

## ಸಮಾಜ ಸುಧಾರಣಾ ಕ್ರಾಂತಿ

ಶರಣರ ಮತ್ತೊಂದು ಕ್ರಾಂತಿಯೆಂದರೆ ಸಮಾಜಸುಧಾರಣೆ. ವ್ಯಕ್ತಿವ್ಯಕ್ತಿಗಳ ನಡುವೆ ಇರುವ ಮೇಲುಕೀಳೆಂಬ ಅನಿಷ್ಟ ಜಾತಿ ಪದ್ಧತಿಯನ್ನು ಹೋಗಲಾಡಿಸಿ, ಹುಟ್ಟಿನಿಂದ ಎಲ್ಲರೂ ಒಂದೇ ಎಂದು ಪರಿಗಣಿಸಿ, ಆ ಭಾವನೆಯಿಂದ ವ್ಯವಹರಿಸುವುದೇ ಈ ಕ್ರಾಂತಿಯ ತಿರುಳು. ಇದರ ಜೊತೆಗೆ, ಸಮಾಜದ ಪ್ರತಿಯೊಬ್ಬ ಮನುಷ್ಯನೂ ಸೋಮಾರಿಯಾಗದೆ ದುಡಿದು ಬದುಕಬೇಕು ಎನ್ನುವ ನಿಲುವು ಶರಣರದಾಗಿತ್ತು. ಇಂಥ ನಿಸ್ವಾರ್ಥ ದುಡಿಮೆಯನ್ನು ಅವರು 'ಕಾಯಕ' ಎಂದು ಕರೆದರು.

ಹಾಗೆಯೇ, 'ಕಾಯಕವೇ ಕೈಲಾಸ'; 'ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು, ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರು' ಎಂದು ಶರಣರು ಘೋಷಿಸಿದರು. 'ಕೈಯಲ್ಲಿ ಇಲ್ಲದವನು ಕಳ್ಳ, ಹೊಟ್ಟೆಗಿಲ್ಲದವನು ಬಡವ' ಎಂಬ ನಾಡುನುಡಿಗೆ ಬದಲಾಗಿ, 'ಕಾಯಕ ಮಾಡದವನು ಕಳ್ಳ, ದೇವರಲ್ಲಿ ಭಕ್ತಿ ಇಲ್ಲದವನು ಬಡವ' ಎಂದು ನುಡಿದರು.